# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **2257**

ಸದಸ್ಯರ ಹೆಸರು : ಶ್ರೀ ಕೆ. ಹರೀಶ್ ಕುಮಾರ್
(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 26-03-2021

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಇತ್ತೀಚಿಗೆ ಸರ್ಕಾರ ನೀಡಿದ ಅಂಕಿ ಅಂಶಗಳ ಪ್ರಕಾರ 21.96 ಲಕ್ಷ ವಾಹನಗಳು ಹೊಸ ಸಾರಿಗೆ ನಿಯಮದಂತೆ ಅನುಪಯುಕ್ತವಾಗುವ (ಗುಜರಿಗೆ ಸೇರುವ) ಸಂಭವವಿದ್ದು, ಇದರಿಂದಾಗಿ ಸಾಲ ಮಾಡಿ ಕಷ್ಟದಲ್ಲಿ ವಾಹನ ಖರೀದಿಸಿ ಜೀವನ ನಿರ್ವಹಣೆ ಮಾಡುವ ವಾಹನ ಮಾಲೀಕರಿಗೆ ತೊಂದರೆಯಾಗುವುದಿಲ್ಲವೇ; | ಕೇಂದ್ರ ಸರ್ಕಾರವು Vehicle Scrappage Policy ಯನ್ನು ಜಾರಿಗೆ ತರಲು 2021-22ನೇ ಸಾಲಿನ ಆಯವ್ಯಯದ ಕ್ರಮ ಸಂಖ್ಯೆ:36ರಲ್ಲಿ ಘೋಷಣೆ ಮಾಡಿದ್ದು, ವಾಹನಗಳ ಮಾಲೀಕರ ಐಚ್ಛಿಕತೆಯ ಮೇರೆಗೆ 20 ವರ್ಷ ಮೀರಿದ ಸಾರಿಗೇತರ ವಾಹನಗಳು ಮತ್ತು 15 ವರ್ಷ ಮೀರಿದ ಸಾರಿಗೆ ವಾಹನಗಳನ್ನು ನಾಶಪಡಿಸಲು ಪ್ರಸ್ತಾಪಿಸಲಾಗಿದೆ. ಈ ಬಗ್ಗೆ ಮಾರ್ಗಸೂಚಿಗಳು ಬಂದ ನಂತರ ರಾಜ್ಯ ಸರ್ಕಾರದಿಂದ ಸೂಕ್ತ ಕ್ರಮ ವಹಿಸಲಾಗುವುದು. |
| ಆ. | ಈ ಕುರಿತಂತೆ ಗುಜರಿಗೆ ಸೇರಲ್ಪಡುವ ವಾಹನ ಮಾಲೀಕರಿಗೆ ಸರ್ಕಾರ ಪರಿಹಾರ / ಅನುಕೂಲ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಅಂತಹ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ನು ಸ್ವೀಕರಿಸಿದ ನಂತರ ಪರಿಶೀಲಿಸಿ ನಿಯಮಾನುಸಾರ ಕ್ರಮ ವಹಿಸಲಾಗುವುದು. |
| ಇ. | ಈ ಕುರಿತಂತೆ ಸರ್ಕಾರದ ನಿಲುವೇನು? (ಮಾಹಿತಿ ಒದಗಿಸುವುದು) | |

ಟಿಡಿ 69 ಟಿಡಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು.